# ಹೊಸತು

## ಹೊಸ ಫಿಲಿಪ್ಸ್ ಅಕ್ವಾ ಟಚ್




ಫಿಲಿಪ್ಸ್ ಇಂಡಿಯಾ ಕಂಪೆನಿ ಇದೀಗ ತನ್ನ ಕಾರ್ಯಾಚರಣೆಯನ್ನು ಮುಂದಿನ ಹಂತಕ್ಕೆ ಕೊಂಡೊಯ್ದಿದೆ. ಪುರುಷರಿಗೆ ಗಡ್ಡದ ಟ್ರಿಮ್ಮಿಂಗ್, ಬಾಡಿಗ್ರೂಮಿಂಗ್, ಸ್ತ್ರೀಯರಿಗೆ ರೋಮ ನಿವಾರಣೆಗೆ ಹೊಸ ಉತ್ಪನ್ನವನ್ನೂ ಬಿಡುಗಡೆ ಮಾಡಿದೆ. ಎಲೆಕ್ಟ್ರಿಕ್ ಶೇವಿಂಗ್ ನಲ್ಲೂ ಬದಲಾವಣೆ ತಂದಿದ್ದು ವೇಗ, ಸುಲಭ ಮತ್ತು ಚರ್ಮಸ್ನೇಹಿ ಶೇವಿಂಗ್ ಅನ್ನು ಪುರುಷರಿಗೆ ನೀಡುತ್ತದೆ. ಇದು ದವಡೆಯಲ್ಲಿ ಗಾಯ, ಗುರುತುಗಳನ್ನು ತಪ್ಪಿಸುವ ವ್ಯವಸ್ಥೆ ಹೊಂದಿದೆ. ಒಂದು ಸಲ ಚಾರ್ಜ್ ಮಾಡಲಾದ ಬ್ಯಾಟರಿ 30 ನಿಮಿಷಗಳ ಕಾರ್ಡ್‌ಲೆಸ್ ಶೇವಿಂಗ್ ನೀಡುತ್ತದೆ. ಎಲ್ಲ ಆಧುನಿಕ ರೀಟೇಲ್ ಮಳಿಗೆಗಳಲ್ಲಿ ಸಿಗುತ್ತದೆ. ಬೆಲೆ 4,995 ರೂಪಾಯಿ.



## ಚೆಸ್ಟರ್ ಫೀಲ್ಡ್ ಲೆದರ್ ಸೋಫಾ

ಗುಲ್‌ಮೊಹರ್ ಲೇನ್.ಕಾಂ ಜೈಪುರ ಇದೀಗ ಜೈಪುರ ಕರಕುಶಲಗಾರರು ತಯಾರಿಸಿದ ಹೊಸ ಹೊಸ ವಿನ್ಯಾಸಗಳ ಲೆದರ್ ಸೋಫಾವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದು ಬರ್ಗಾಂಡಿ ಬಣ್ಣದಲ್ಲಿದ್ದು ರಾಯಲ್ಟಿ ಮತ್ತು ಶ್ರೀಮಂತಿಕೆಯ ಪ್ರತೀಕವಾಗಿದೆ ಎನ್ನುವುದು ಕಂಪೆನಿ ವಿವರಣೆ.

ಸೋಫಾ ಮೆತ್ತಗಿದ್ದು ಕುಳಿತುಕೊಳ್ಳಲು ಅತ್ಯಂತ ಆರಾಮದಾಯಕವಾಗಿದೆ. ಹೊಸ ಮನೆ ಕಟ್ಟಿಸಿಕೊಂಡವರಿಗೆ ಒಳಾಂಗಣ ವಿನ್ಯಾಸವೂ ಚೆನ್ನಾಗಿ ಕಾಣಲು ಈ ಸೋಫಾ ಸೆಟ್ ಖರೀದಿಸಬಹುದು. ಬೆಲೆ, ಲಭ್ಯತೆ ಮತ್ತಿತರ ಮಾಹಿತಿಗಾಗಿ – **gulmoharlane.com**

## ಫ್ಯಾಬ್ ಅಲೆ ಉಡುಪು

ಫ್ಯಾಷನ್‌ಪ್ರಿಯರಿಗಾಗಿ ಫ್ಯಾಬ್‌ಅಲೆ ಹೊಸ ಹೊಸ ವಿನ್ಯಾಸಗಳ ಉಡುಪುಗಳ ಸಂಗ್ರಹವನ್ನು ಮಾರುಕಟ್ಟೆಗೆ ಅನಾವರಣಗೊಳಿಸಿದೆ. ಇದರಲ್ಲಿ ಫ್ರಾಕ್‌ಗಳು, ಶರ್ಟ್, ನೈಟ್‌ವೇರ್, ಲೇಸ್‌ಮ್ಯಾಕ್ಸಿ ಸ್ಲಿಪ್ ಮುಂತಾದ ವೈವಿಧ್ಯಗಳಿವೆ. ಬೆಲೆ 1200 ರೂಪಾಯಿಗಳಿಂದ ಆರಂಭ. ಲಭ್ಯತೆ ಮತ್ತಿತರ ಮಾಹಿತಿಗೆ: 9999900229 ಸಂಪರ್ಕಿಸಬಹುದು.



## ಒಪ್ಪೊ ಜಾಯ್ 3 ಸ್ಮಾರ್ಟ್‌ಫೋನ್

ಜಾಗತಿಕ ಟೆಕ್ನಾಲಜಿ ಬ್ರಾಂಡ್ ಆಗಿರುವ ಒಪ್ಪೊ ಇದೀಗ ಒಪ್ಪೊ ಜಾಯ್ 3 ಸ್ಮಾರ್ಟ್‌ಫೋನ್ ಅನ್ನು ಬಿಡುಗಡೆ ಮಾಡಿದೆ.

ಡ್ಯುಯಲ್ ಸಿಮ್‌ಗಳ ಈ 3 ಜಿ ಸ್ಮಾರ್ಟ್‌ಫೋನ್ 4.5 ಇಂಚಿನ ಐಪಿಎಸ್ ಸ್ಕ್ರೀನ್ ಹೊಂದಿದೆ. 2000 ಎಂಎಎಚ್ ಬ್ಯಾಟರಿ 180 ಗಂಟೆಗಳ ಸ್ಟ್ಯಾಂಡ್‌ಬೈ ಬ್ಯಾಟರಿ ಬ್ಯಾಕ್‌ಅಪ್ ಒದಗಿಸಲಿದೆ. 1.3 ಗಿಗಾ ಹರ್ಟ್ಸ್ ಕ್ವಾಡ್‌ಕೋರ್ ಪ್ರೊಸೆಸರ್ ಇದು ಹೊಂದಿದೆ. ಜಾಯ್ 3 5ಎಂಪಿ ಎಫ್‌ಎಫ್ ಮತ್ತು 2ಎಂಪಿ ಎಫ್‌ಎಫ್ ಕ್ಯಾಮೆರಾ ಇದರಲ್ಲಿದೆ. ಮೀಡಿಯಾ ಟೆಲ್ ಆಧಾರಿತ ಕಲರ್ಸ್ ಒಎಸ್ 2.0.1 ಆಂಡ್ರಾಯ್ಡ್ 4.4 ಮೇಲೆ ಇದು ಕಾರ್ಯ ನಿರ್ವಹಿಸುತ್ತದೆ.

ಬೆಲೆ 7990 ರೂಪಾಯಿ. ಎಲ್ಲ ಒಪ್ಪೊ ಮಳಿಗೆಗಳಲ್ಲಿ ಸಿಗುತ್ತದೆ. ಮಾಹಿತಿಗೆ: 9448902288




## ಬನಾನ ಕ್ಯಾರಮೆಲ್ ಒರಿಯೊ



ಮಕ್ಕಳಿಗೆ ಪ್ರಿಯವಾದ ಮ್ಯಾಕ್‌ಡೊನಾಲ್ಡ್ಸ್ ಇದೀಗ ಮಕ್ಕಳನ್ನು ಆಕರ್ಷಿಸಲು ಹೊಸ ಸ್ವಾದದ ಬನಾನ ಕ್ಯಾರಮೆಲ್ ಒರಿಯೊ ಮತ್ತು ಬನಾನ ಒರಿಯೊ ಸಾಫ್ಟ್ ಸರ್ವ್ ಎಂಬ ತಿನಿಸುಗಳನ್ನು ಬಿಡುಗಡೆ ಮಾಡಿದೆ. ಇದು ಸಿಹಿಯ ಜತೆಗೆ ಕ್ರೀಮೀ ಕ್ರಂಚೀ ಆಗಿರುವುದರಿಂದ ಮಕ್ಕಳನ್ನು ಸೆಳೆಯುವುದರಲ್ಲಿ ಸಂಶಯವೇ ಇಲ್ಲ ಎಂಬುದು ಕಂಪೆನಿ ನಂಬಿಕೆ. ಬೆಲೆ 35 ರೂಪಾಯಿ.